Reported Cement and iron Shortages of two Harijan hostels under Construction at Bangalore.

ಶ್ರೀ ಕೋಣಂದಿಪುರು ಲಿಂಗಪ್ಪ (ತೀರ್ಥಹಳ್ಳಿ).— ಮಾನ್ಯ ಅಧ್ಯಕ್ಷರೇ, ಸರ್ಕಾರದಲ್ಲಿ ಒಂದು ಪ್ರಮುಖವಾದ ವಿಷಯವನ್ನು ನಿನ್ನೆ ಅಥವಾ ಇವತ್ತು ಪ್ರಸ್ತಾಪಮಾಡಬೇಕೆಂದು ನಾನು ನೋಟೀಸ್ ಕೊಟ್ಟಿದ್ದೆ. ಹಿಂದೆ ನಮ್ಮ ಬೆಂಗಳೂರು ನಗರದ ಪರಿಶಿಷ್ಟ ಮತ್ತು ನಿಮ್ನ ವರ್ಗದ ಹಾಸ್ಟಲ್‌ಗಳಲ್ಲಿ ಆದಂಥ ಅವ್ಯವಹಾರಗಳ ಬಗ್ಗೆ ಸಿಮೆಂಟ್ ಮತ್ತು ಉಕ್ಕಿನ ಕೊರತೆಯ ವಿಷಯದಲ್ಲಿ ಏನೇನು ದುರ್ವ್ಯವಹಾರವಾಗಿದೆ ಎಂಬ ಬಗ್ಗೆ ಜಾಗೃತ ಆಯೋಗದವರಿಂದ ಒಂದು ವರದಿಯನ್ನು ತರಿಸಿ ಅದನ್ನು ಈ ಸಭೆಯ ಮುಂದೆ ಇಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಆ ವರದಿಯನ್ನು ಇನ್ನೂ ಇಡುವರೆಗೆ ಮಂಡನೆ ಮಾಡಲಿಲ್ಲ.

ಅಧ್ಯಕ್ಷರು.—ಅದನ್ನು ಮಾನ್ಯ ಶ್ರೀ ಚನ್ನಬಸಪ್ಪನವರು ಇವತ್ತೇ ಇಲ್ಲಿ ಓದಿದರು. ಮಾನ್ಯ ಸದಸ್ಯರು ಈ ಸಭೆಯಲ್ಲಿ ಇರಲಿಲ್ಲವೆಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ. ಇವತ್ತು ಸ್ವಲ್ಪ ಮಾತ್ರ ಓದಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಉತ್ತರ ಕೊಡುವ ದಿವಸ ಆ ವರದಿ ಗಳ ವಿವರಗಳನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಇಲ್ಲದಿದ್ದರೆ ಅದಕ್ಕೆ ನಾನೇನು ಮಾಡಲಿ ?

ಶ್ರೀ ಕೋಣಂದೂರು ಲಿಂಗಪ್ಪ — ಅದರ ಸಂಬಂಧ ಅಷ್ಟಕ್ಕೇ ಸೀಮಿತವಾಗಿರಲಿಲ್ಲ. ಈ ಒಂದು ವಿಚಾರಕ್ಕೂ ಮತ್ತು ಮಾನ್ಯ ಶ್ರೀ ಚನ್ನಬಸಪ್ಪನವರ ಮನೆಯ ಸಂಬಂಧಕ್ಕೂ ಏನೂ ಸಂಬಂಧ ಇಲ್ಲ. ಆದರೆ ಜನಗಳು ಈ ವಿಚಾರದಲ್ಲಿ ಆಡಿಕೊಳ್ಳುವುದರಿಂದ ನಾನು ಹೇಳಿದೆ.

SRI H.M. CHANNABASAPPA (Minister for Public Works and Electricity) I will have to raise a Privilege Motion in the matter unless he makes a specific allegation on a specific basis. I have already replied to the points raised by hon. member. If he still persists in the matter, I will have to raise a privilege motion in the matter.

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಅಧ್ಯಕ್ಷರೇ; ಸಭೆಯು ಮಾನ್ಯ ಉಪನಾಯಕರು ಹೀಗೆ ನಮ್ಮನ್ನು ಥ್ರೆಟನ್ ಮಾಡಿದರೆ ನಾವೂ ಕೂಡ ತಕ್ಕ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಮಾನ್ಯ ಮಂತ್ರಿಗಳ ವಿಚಾರದಲ್ಲಿ ನನಗೆ ತಿಳಿದುಬಂದ ಒಂದು ವಿಷಯವನ್ನು ಸಭೆಯಲ್ಲಿ ತಿಳಿಸಿ ಅದರ ಬಗ್ಗೆ ಉತ್ತರ ಪಡೆಯುವುದಕ್ಕೆ ಇಲ್ಲಿ ಅವಕಾಶವಿಲ್ಲ — ಅದನ್ನು ಇನ್ನೂ ಒತ್ತಾಯ ಮಾಡಿದರೆ ತಾವು ಪ್ರಿವಿಲೇಜ್ ಮೋಷನ್ನನ್ನು ಮೂವ್ ಮಾಡಬೇಕಾಗುತ್ತದೆಂದು ಹೇಳುತ್ತಿರುವುದನ್ನು ನೋಡಿದರೆ 'ಕಂಡವ್ನನ್ನು ಕಂಡ ಹಾಗೆ ಹೇಳಿದರೆ ಕೆಂಡದಂಥ ಕೋಪ ಬಂತು' ಅಂದ ಹಾಗೆ ಅವರು ಹೇಳುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಗಳಾದರೋ ವಯೋವೃದ್ಧರು - ಜ್ಞಾನವೃದ್ಧರು ಅವರಿಗೇ ಅಷ್ಟು ಸಿಟ್ಟು ಕೋಪ ಬಂದರೆ ಇನ್ನು ಚಿಕ್ಕವಯಸ್ಸಿನವನಾದ ನನಗೂ ಸಿಟ್ಟು ಬರುತ್ತದೆ.....

ಅಧ್ಯಕ್ಷರು.— ಇಲ್ಲಿ ಯಾರಿಗೂ ಸಿಟ್ಟಾಗಲಿ ಬರುವುದಕ್ಕೆ ಅವಕಾಶವಿರುವುದಿಲ್ಲ...

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಅಧ್ಯಕ್ಷರೇ; ನಾನು ವಿಜಿಲೆನ್ಸ್ ಕಮಿಟಿಯ ವರದಿ ಬಗ್ಗೆ ಸಭೆಗೆ ಅವರು.....

ಅಧ್ಯಕ್ಷರು.— ಆ ವರದಿಯನ್ನು ಮಾನ್ಯ ಮಂತ್ರಿಗಳು ಆ ದಿವಸವೇ ಇಲ್ಲಿ ಸಭೆಯಲ್ಲಿ ಓದಿ ತಿಳಿಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ನಾನೂ ಪತ್ರಿಕೆಗಳಲ್ಲಿ ಅವರ ಹೇಳಿಕೆಯನ್ನು ಓದಿದ್ದೇನೆ. ಈ ಪಾಪಿಗಳು ಪುನೀತರಾಗಲಿ–ಎಂದು ಅವರು ಆಶೀರ್ವಾದ ಮಾಡಿದ್ದಾರೆ. ಆದರೆ ನಾನು ಯಾರೋ ಒಬ್ಬರ ಕೈ ಗೊಂಬೆಯಾಗಿ ಯಾರನ್ನೂ ಇಲ್ಲಿ ವಿನಾಕಾರಣ ಅವಮಾನಮಾಡಬೇಕೆಂಬ ಉದ್ದೇಶ ನನಗಿಲ್ಲ. ನಾನು ನನಗೆ ಒಂದಷ್ಟು ದ್ದಿಯನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದು ಅದರ ಬಗ್ಗೆ ವಿವರಣೆ ಕೇಳಿದೆ. ಆಗ ಸಭೆಯಲ್ಲಿದ್ದ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದಾಗಿ ತಿಳಿಸಿದ್ದರು. ಆದರೆ ಈ

ಸಂದರ್ಭದಲ್ಲಿ ನನಗೊಂದು ಅನಾಥ ಶಿಶುವಿನ ಕಥೆ ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ 'ತಾನೇ ಆರೋ ಪಿಯಾಗಿರುವಾಗ' 'ತಾನೇ ತಾನು ಪರಮ ಪುನೀತ–ಸತ್ಯಸಂಧ' ಎಂದು ಹೇಳಿಕೊಳ್ಳುವುದು ನನಗೆ ಸರಿ ಕಾಣುವುದಿಲ್ಲ ಆದರೆ ನನಗೆ ತಿಳಿದಿರತಕ್ಕ ವಿಷಯಗಳನ್ನು ನಾನು ಇಲ್ಲಿ ತಿಳಿಸಬೇಕಾಗಿರುವುದರಿಂದ ಮಾನ್ಯ ಅಧ್ಯಕ್ಷರು ಅದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಮಾನ್ಯ ಅಧ್ಯಕ್ಷರೇ; ಈ ಮುಂದೆ ನಾನು ಆ ಎರಡು ಹಾಸ್ಟಲು ಸಿವೆಂಟ್ ಮತ್ತು ಕಬ್ಬಿಣ ಖೋತಾ ಆಗಿದೆ ಎಂಬ ವಿಷಯದಲ್ಲಿ ಒಂದು ಹೇಳಿಕೆಯನ್ನು ಕೊಡುವುದಾಗಿ ಹೇಳಿದ್ದೆ- ನಿಜ. ಅದರೆ ಅಷ್ಟರಲ್ಲೇ ಅದನ್ನು ಮುಂದುವರಿಸಬೇಕೆಂದು ಟೆಲಿಗ್ರಾಂ ಬಂದ ಕಾರಣ ಅದನ್ನು ಮುಂದೂಡಲಾಯಿತು. ಇತ್ತೀಚೆಗೆ ಮಾನ್ಯ ಸಚಿವರು ಈ ವಿಚಾರದಲ್ಲಿ ಉತ್ತರವನ್ನು ಕೊಟ್ಟಿದ್ದಾರೆಂದು ನನಗೆ ಗೊತ್ತಾಯಿತು, ಹಾಗೆ ಅವರು ಸಭೆಗೆ ವಿಷಯಗಳನ್ನು ತಿಳಿಸಿದಮೇಲೂ ಮತ್ತೆ ಶ್ರೀ ಕೊಣಂದೂರು ಲಿಂಗಪ್ಪನವರು ತಮಗೆ ಯಾವುದೋ ವಿಚಾರವಾಗಿ ಅಸಮಾಧಾನಬಂದಿದೆ ಅದರ ಬಗ್ಗೆ ಮತ್ತೆ ಚರ್ಚೆಯನ್ನು ಪ್ರಾರಂಭಮಾಡಬೇಕಾದರೆ ಅದಕ್ಕೆಲ್ಲಾ ಈ ಸಭೆಯ ನಿಯಮಾವಳಿಗಳಿವೆ ಅದಕ್ಕೆ ಕಾನೂನಿದೆ ಅವುಗಳನು ಅನುಸರಿಸಿ ಅವರು ಕಾರ್ಯಕ್ರಮ ಕೈಗೊಳ್ಳಲಿ ಹಾಗಲ್ಲದೆ ಮಾನ್ಯ ಸದಸ್ಯರು ಏಕಾಏಕಿ ಪೇಪರುಗಳಲ್ಲಿ ಏನೋ ಬರೆದಿದ್ದಾರೆ, ಅಥವಾ ಬೀದಿಯಲ್ಲಿ ಯಾರೋ ಏನೋ ಹೇಳಿಕೊಂಡು ಹೋಗುತ್ತಿದ್ದರು ಎಂದು ಹೇಳಿ ಈ ಸಭೆಯಲ್ಲಿ ಯಾವುದೇ ಒಬ್ಬ ಸದಸ್ಯರ ಹಿರಿಮೆಗೆ ಮತ್ತು ಅವರ ಗೌರವಗಳಿಗೆ ಧಕ್ಕೆ ತರತಕ್ಕ ವಿಚಾರಗಳನ್ನು ಎತ್ತುವುದಕ್ಕೆ ಅವಕಾಶ ಇಲ್ಲ. ಈ ವಿಚಾರದಲ್ಲಿ ಕಾನೂನು ಸ್ಪಷ್ಟವಾಗಿದೆ. ಆವರು ನನಗೆ ಅನುಮಾನ ಬಂದಿದೆ ಅದನ್ನು ನಾನು ಪರಿತ್ಯಾಗಮಾಡಿಕೊಳ್ಳಬೇಕು- ಯಾರೋ ಚಿನ್ನದ ಕುಂಬಳ ಕಾಯನ್ನು ಕದ್ದರೆಂದು ಹೇಳುತ್ತಿದ್ದಾರೆ ಎಂದು ಇಲ್ಲಿ ಏಕಾಏಕಿ ಅದನ್ನು ಎತ್ತುವುದಕ್ಕಾಗುವುದಿಲ್ಲ. ಅದರ ಬಗ್ಗೆ ಮೊದಲು ಅಧ್ಯಕ್ಷರಿಗೆ ಬರವಣಿಗೆಲಿ ಬರೆದುಕೊಡಬೇಕು- ಅನಂತರ ಅವರು ಅನುಮತಿ ಕೊಟ್ಟಿಗೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಬಹುದು. ಅದನ್ನು ಆ ಕ್ರಮದಲ್ಲಿ ತಾರದೆ 'ಎತ್ತು ಈಯಿತು – ಕೊಟ್ಟಿಗೆ ಯಲ್ಲಿ ಕಟ್ಟಿ' ಎನ್ನುವಂತೆ ಏನೋ ಒಂದು ಉದ್ದೇಶದಿಂದ ಏನು ಬೇಕಾದರೂ ಹೇಳುತ್ತೇನೆಂದರೆ ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ನಮ್ಮ ಶಾಸನ ಸಭೆಯ ನಡುವಳಿಕೆಯ ವಿಧಿನಿಯಮಗಳ ರೂಲ್ಸ್ ೨೮೪ರ ಪ್ರಕಾರ.—

"No allegation of a defamatory or incriminatory nature shall be made by a member against any person unless the member had given previous intimation to the Speaker and also to the Minister concerned so that the Minister may be able to make an investigation into the matter for the purpose of reply:

Provided that the Speaker may at any time prohibit any member from making any such allegation....." ಹೀಗೆ ರೂಲ್ಸ್‌ನಲ್ಲಿ ನಿರ್ದಿಷ್ಟವಾಗಿ ಹೇಳಿದೆ ಅದರಂತೆ ಅವರು ಮುಂದುವರಿಯಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಅಧ್ಯಕ್ಷರೇ; ಇದು ಒಬ್ಬ ಸಾಮಾನ್ಯ ಸದಸ್ಯರ ಮೇಲೆ ಮಾಡಿರತಕ್ಕ ಅಪಾದನೆಯಲ್ಲ. ಜವಾಬ್ದಾರಿಯಾದ ಒಬ್ಬ ಮಂತ್ರಿಗಳ ಬಗ್ಗೆ ಮಾಡಿರಕ್ಕ ಅಪಾದನೆ.....

ಶ್ರೀ ಡಿ. ದೇವರಾಜ ಅರಸ್.— ನಾನು ಹೇಳಿದ್ದನ್ನು ತಾವು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ ನನ್ನ ತಪ್ಪಲ್ಲ. ಅವರ ಮೇಲೆ ಬಂದಿದ್ದ ಅಪಾದನೆಗಳೆಲ್ಲಾ ಬೇಸ್‌ಲೆಸ್ ಎಂದು ಹೇಳಿದ್ದೇನೆ; ಅವರೂ ಹೇಳಿದ್ದಾರೆ.

ಅಧ್ಯಕ್ಷರು.— ನನ್ನ ಆಫೀಸಿಗೆ ಒಂದು ನೋಟಿಸ್ ಬಂದಿದೆ, ಆದರೆ ಇದರ ವಿಚಾರದ ಬಗ್ಗೆ ಮಾನ್ಯ ಪಿ.ಡಬ್ಲ್ಯೂ.ಡಿ ಸಚಿವರು ಎಲ್ಲ ವಿವರಗಳನ್ನೂ ಆಗಲೆ ಓದಿ ಸಭೆಗೆ ತಿಳಿಸಿದ್ದರು, ಆಷ್ಟಾದ ಮೇಲೂ ಮಾನ್ಯ ಸದಸ್ಯರು ತಮಗೆ ಇನ್ನೂ ಅನುಮಾನ ಬಂದಿದೆ ಎಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಗಳು ಸಲಹೆ ಮಾಡಿದಂತೆ ಎಲ್ಲರೂ ಶಾಸನ ಸಭೆಯ ನಡವಳಿಕೆಯ ವಿಧಿನಿಯಮಗಳನ್ನು ಅನುಸರಿಸುವುದು ಒಳ್ಳೆಯದು.

ಇನ್ನು ಎರಡನೇಯದಾಗಿ—ಇಷ್ಟೆಲ್ಲಾ ವಿಚಾರಗಳು ನಡೆದು ಹೋಗಿದ್ದರೂ ಇನ್ನೂ ಈಗತಾನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ತಿಳಿಯುವುದಕ್ಕೆ ಮೊದಲೇ ಇದನ್ನು ಪ್ರಸ್ತಾಪಮಾಡು

(ಅಧ್ಯಕ್ಷರು)

ವುದಕ್ಕೆ ಈಗಲೇ ಅವಕಾಶ ಕೊಡಿ ಎಂದು ಅವರು ಕೇಳುತ್ತಿದ್ದರೆ ನಾನು ಅಧ್ಯಕ್ಷ ಸ್ಥಾನದಿಂದ ಇಳಿದು ಬಂದು ಮಾನ್ಯ ಸದಸ್ಯರನ್ನು ದಯಮಾಡಿ ಕುಳಿತುಕೊಳ್ಳಿ ಎಂದು ಹೇಳಿ ಕೂಡಿಸುವುದಕ್ಕಾಗುವುದಿಲ್ಲ. ಹಾಗೆ ಮಾಡುವುದಕ್ಕೆ ವಿಧಿನಿಯಮಗಳಲ್ಲಿ ಅವಕಾಶವಿಲ್ಲ. ದಯಮಾಡಿ ಸರ್ವರೂ ಇಲ್ಲಿ ನಡೆಯುತಕ್ಕ ಕಾರ್ಯ ಕಲಾಪಗಳ ಬಗ್ಗೆ ರಚಿಸಿರತಕ್ಕ ವಿಧಿನಿಯಮಗಳನ್ನ ಅನುಸರಿಸಿ ನಡೆದರೆ ಛೇರಿಗೆ ಬಹಳ ಉಪಕಾರ ಮಾತಿ ದಂತಾಗುತ್ತದೆ.....

ಶ್ರೀ ಕೋಣಂದೂರು ಲಿಂಗಪ್ಪ.—ವಿಧಿನಿಯಮಗಳ ಪ್ರಕಾರವೇ ನಾನು ಆ ದಿವಸವೇ ಬರೆದು ಕೊಟ್ಟಿದ್ದೆ ನೆನ್ನೆ ಮತ್ತೊಂದನ್ನು ಬರೆದುಕೊಟ್ಟೆ. .....

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳುತ್ತಿರುವುದೆಲ್ಲಾ ಸರಿ. ಆದರೆ ಆ ವಿಚಾರದಲ್ಲಿ ಮಾನ್ಯ ಸಚಿವರ ದೀರ್ಘವಾದ ಹೇಳಿಕೆಯನ್ನು ಸಭೆಯ ಮುಂದೆ ಕೊಟ್ಟಿದ್ದಾಗಿದೆ.....

ಶ್ರೀ ಕೋಣಂದೂರು ಲಿಂಗಪ್ಪ.— ನಾನು ಯಾವ ವ್ಯಕ್ತಿಗೂ ಕಳಂಕ ಹಚ್ಚಬೇಕೆಂದು ಹೊರಟಿಲ್ಲ. ನನ್ನ ಗಮನಕ್ಕೆ ಬಂದ ಗಹನವಾದ ವಿಚಾರಗಳನ್ನು ಸಭೆಯ ಗಮನಕ್ಕೆ ತರುವುದು ನನ್ನ ಕರ್ತವ್ಯವಲ್ಲವೇ?

ಅಧ್ಯಕ್ಷರು.— ಒಂದು ವಿಚಾರ ಸಭೆಯಲ್ಲಿ ಬಂದಾವರ್ತಿ ತೀರ್ಮಾನವಾದ ನಂತರ ಅದನ್ನು ಮತ್ತೆ ಎತ್ತುವುದಕ್ಕೂ ರೂಲ್ಸ್ ಪ್ರಕಾರ ಅವಕಾಶವಿಲ್ಲ. ಈ ವಿಚಾರದಲ್ಲೂ ನಿಯಮಗಳಿವೆ. ಅದನ್ನು ಮಾನ್ಯ ಸದಸ್ಯರು ಅನುಸರಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸಚಿವರು ಕೊಟ್ಟ ಹೇಳಿಕೆಯ ಒಂದು ಕಾಪಿ ನನಗೆ ಬೇಕಾಗಿದೆ.....

ಅಧ್ಯಕ್ಷರು,— ಸಭೆಯಲ್ಲಿ ಮಾನ್ಯ ಸಚಿವರು ಭಾಷಣ ಮಾಡುತ್ತಾ ಮಾನ್ಯ ಸದಸ್ಯರು ಕೇಳಿದ್ದ ಅಂಶಗಳ ಬಗ್ಗೆ ಉತ್ತರಗಳನ್ನು ನೀಡಿದ್ದಾರೆ. ಅವರ ಭಾಷಣದ ಪ್ರತಿಯನ್ನು ಸರ್ಕ್ಯುಲೇಟ್ ಮಾಡುವುದಕ್ಕೆ ಸಾಧ್ಯವಿಲ್ಲ.

2-30 P.M.

ಶ್ರೀ ಕೆ. ಎಚ್., ಹನುಮೇಗೌಡ —ಕಳೆದ ಸಾರಿ ಜನರಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡಿನ ಚರ್ಚೆ ವಿಷಯ ಸಭೆಗೆ ಮುಂದೆ ಬಂದಾಗ ೫೮ ಡಿಪಾರ್ಟ್‌ಮೆಂಟಲ್ ಸಮಿತಿಗಳ ವಿಚಾರ ಸಭೆಗೆ ತಿಳಿಸುವುದಾಗಿ ಹೇಳಿದ್ದರು. ಯಾರಿಗೂ ಅನ್ಯಾಯವಾಗದ ಹಾಗೆ ವ್ಯವಸ್ಥೆ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದರು. ಎಲ್ಲರಿಗೂ ಸಮಾನವಾದ ಅವಕಾಶವಿರಬೇಕು ಎಂದು ಹೇಳಿ ಅಂದು ಸಭೆಯ ಕಾರ್ಯಕಲಾಪ ನಡೆಯಲು ಅವಕಾಶ ಕೊಡಲಿಲ್ಲ.

ಅಧ್ಯಕ್ಷರು.—ಡಿಮ್ಯಾಂಡ್ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಇವತ್ತು ಅದನ್ನು, ಹೇಳಬಹುದು.

ಶ್ರೀ ಡಿ. ದೇವರಾಜ ಅರಸ್.—ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಹೇಳುತ್ತೇನೆ

BUDGET ESTIMETES FOR 1974-75, DEMANDS FOR GRANTS

Demand Nos: 2, 7, 12, 13, 15, 16, 21 and 26
(Debate Continued)

† SRI B. SUBBAIAH SETTY (Suratkal).— Everybody knows that even to this day the bureaucratic machinery does not enjoy the confi-